ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಕ್ರಿಮಿನಲ್) | **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**<br>**2ನೇ ನ್ಯಾಯಾಲಯ, ಶಿವಮೊಗ್ಗ** |
|---|---|

**C.C. No. 61/2024** **PW 09**
**CW 11**

| | |
|---|---|
| ಸಾಕ್ಷಿಯ ಹೆಸರು | ಡಾಃ ಶ್ರೀವಾಣಿ |
| ಗಂಡ/ತಂದೆಯ ಹೆಸರು | ಪ್ರಭುಲಿಂಗ ವೈ ಕೊಣ್ಣುರು |
| ವಯಸ್ಸು | 56 ವರ್ಷ |
| ಉದ್ಯೋಗ | ನಿವೃತ್ತ ವೈಧ್ಯಾದಿಕಾರಿಗಳು |
| ವಾಸಸ್ಥಳ | ಬೆಂಗಳೂರು |

ಸಾಕ್ಷಿಯು ವಿ.ಸಿ. ಮೂಲಕ ದಿಃ 14.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಮೆಗ್ಗಾನ್ ಆಸ್ಪತ್ರೆಯಲ್ಲಿ 18.07.2018 ರಿಂದ 2025 ಮೇ ವರೆಗೆ ವೈಧ್ಯಾದಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30.03.2023 ರಂದು ಮದ್ಯಾಹ್ಞ 2.00 ಗಂಟೆಗೆ ಚಾಸಾ 1ರವರು ಹಲ್ಲೆಯ ಹಿನ್ನಲೆಯಲ್ಲಿ ನನ್ನ ಮುಂದೆ ಚಿಕಿತ್ಸೆಗೆ ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಚಾಸಾ 1 ರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಎಡ ಮತ್ತು ಬಲ ಎದೆಯಲ್ಲಿ ಹಾಗೂ ಬಲಬುಜದಲ್ಲಿ ನೋವು.
2. ಎಡ ಮತ್ತು ಬಲ ತೋಳಿನಲ್ಲಿ ನೊವು.
3. ಮೂಗಿನಲ್ಲಿ ನೋವು ಕಂಡು ಬಂದಿರುತ್ತದೆ.

ನಂತರ ರೋಗಿಯನ್ನು ಮೂಳೆ ತಜ್ಞರ ಬಳಿ ಹೆಚ್ಚಿನ ಚಿಕಿತ್ಸೆಗೆ ಕಳುಹಿಸಿಕೊಟ್ಟಿದ್ದು, ಯಾವುದೇ ಮೂಳೆ ಮುರಿತ ಕಂಡು ಬಂದಿರುವುದಿಲ್ಲ. ಚಾಸಾ – 1 ರವರಿಗೆ ನಾನು ಚಿಕಿತ್ಸೆ ನೀಡಿರುತ್ತೇನೆ. ನನ್ನ ಅಬಿಪ್ರಾಯದಲ್ಲಿ ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತವೆ, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ 49 ಮತ್ತು 50 ಗಾಯದ ಪ್ರಮಾಣ ಪತ್ರಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ–50(ಬಿ) ಎಂದು ಗುರುತಿಸಲಾಯಿತು. ಎಂ.ಒ, 1 ದೊಣ್ಣೆಯಿಂದ ಹೊಡೆದಾಗ ನಿಪಿ 49 ಮತ್ತು 50 ದಾಖಲೆಗಳಲ್ಲಿ ಹೇಳಿರುವ ಗಾಯಗಳು ಉಂಟಾಗುವ ಸಾಧ್ಯತೆ ಇರುತ್ತದೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಸ್.ಹೆಚ್. ವಕೀಲರಿಂದಃ

ನಿಪಿ 50 ಗಾಯದ ಪ್ರಮಣ ಪತ್ರವನ್ನು ನಾನೇ ತಯಾರಿಸಿರುತ್ತೇನೆ. ನಿಪಿ 50 ದಾಖಲೆಯನ್ನು ತಯಾರಿಸುವ ಪೂರ್ವದಲ್ಲಿ ನಾನು ವೈದ್ಯಕೀಯ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ಎಂ. ಒ. 1 ರಿಂದ ಬಲವಾಗಿ ಹೊಡೆದಾಗ ರಕ್ತಗಾಯ ಮತ್ತು ರಕ್ತ ಹೆಪ್ಪು ಟ್ಟಿದ ಗಾಯ ಉಂಟಾಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿ ಏನಾದರೂ ಆಗ ಬಹುದು ಎಂದು ನುಡಿಯುತ್ತಾರೆ. ನಿಪಿ 50 ರಲ್ಲಿ ಹೇಳಿರುವ ಗಾಯಗಳು ಎಂ.ಒ 1 ರಿಂದ ಹಲ್ಲೆ ಮಾಡಿದಾಗ ಉಂಟಾಗುವ ಸಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ– 1 ರವರಿಗೆ ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 49 ಮತ್ತು 50 ದಾಖಲೆಗಳಲ್ಲಿ ಹೇಳಿರುವ ಗಾಯಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 50 ದಾಖಲೆಯಲ್ಲಿ ದಿಃ 30.03.2023 ರಂದು ಗಾಯುಗಳು ಉಂಟಾಗುವ ಸಾಧ್ಯತೆ ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆಃ– ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ. ಎಂದು ಒಪ್ಪಿರುತ್ತಾರೆ.

2ನೇ ಜೆ.ಎಂ.ಎಫ್.ಸಿ. ನ್ಯಾಯಧೀಶರು,
ಶಿವಮೊಗ್ಗ.